# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ಜಿಲ್ಲೆ,

## ನೆಲ ಮಹಡಿ , ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು.

ದೂರವಾಣಿ: 0816-2255133 ಇ-ಮೇಲ್: dlsatumkur1@gmail.com

ಸಂಖ್ಯೆ: ಡಿಎಲ್‌ಎಸ್‌ಎ/PLV ನೇಮಕಾತಿ/01/2024 ದಿನಾಂಕ:10.07.2024

### : ಅಧಿಸೂಚನೆ :

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ರಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕ ( ಪಿಎಲ್‌ವಿ) ರವರ ನೇಮಕಾತಿ ಬಗ್ಗೆ .

******

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ 2009 ರ ಪಿಎಲ್‌ವಿ ಯೋಜನೆ (ಪರಿಷ್ಕೃತ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ:07/ಪಿಎಲ್ ವಿ/2023/779/2024, ದಿ:29.06.2024 ರ ಮೇರೆಗೆ ಜನ ಸಾಮಾನ್ಯರಿಗೆ ಅವಶ್ಯ ಕಾನೂನು ಸಹಾಯ ಒದಗಿಸುವ ನಿಟ್ಟಿನಲ್ಲಿ ತುಮಕೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ನಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕ (ಪಿಎಲ್‌ವಿ) 50 (100) ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

A) **ಅರೆ ಕಾಲಿಕ ಕಾನೂನು ಸ್ವಯಂ ಸೇವಕ ( ಪಿಎಲ್‌ವಿ) ರವರ ನೇಮಕಾತಿ ಪ್ರಕ್ರಿಯೆ ಈ ಕೆಳಗಿನಂತಿರುತ್ತದೆ.**

**1. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 11.07.2024 ಕೊನೆಯ ದಿನಾಂಕ: 26.07.2024 ಸಂಜೆ 5.00 ಘಂಟೆ** ತನಕ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **0816 – 2255133** ಮತ್ತು ಇ ಮೇಲ್ ಪತ್ರ ವ್ಯವಹಾರಕ್ಕಾಗಿ E mail – dlsatumkur1@gmail.com ಗೆ ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸಬೇಕಾದ ವಿಳಾಸ:

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ
ಸದಸ್ಯರು, ಅರೆಕಾಲಿಕ ಕಾನೂನು ಸ್ವಯಂ ಸೇವಕ (ಪಿಎಲ್ ವಿ)
ನೇಮಕಾತಿ ಸಮಿತಿ, ನೆಲ ಮಹಡಿ , ಹೊಸ ನ್ಯಾಯಾಲಯಗಳ ಸಂಕೀರ್ಣ,
ತುಮಕೂರು.

**2. ಅರ್ಜಿಯ ನಮೂನೆ** ಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ , ನೆಲಮಹಡಿ , ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು ನಲ್ಲಿ ಖುದ್ದಾಗಿ ( ರಜೆ ದಿನಗಳನ್ನು ಹೊರತುಪಡಿಸಿ )ಅಥವಾ ತುಮಕೂರು ಜಿಲ್ಲಾ

ನ್ಯಾಯಾಲಯದ ವೆಬ್‌ಸೈಟ್ ರ ಮೂಲಕ **ಬೆಳಗ್ಗೆ 10.30 ರಿಂದ ಸಂಜೆ 5.00 ಘಂಟೆ** ಸಮಯದಲ್ಲಿ ಪಡೆದುಕೊಳ್ಳಬಹುದಾಗಿದೆ.

**3.ಶೈಕ್ಷಣಿಕ ಅರ್ಹತೆ :** ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ , ಕಾನೂನು ಪದವೀಧರರು (ವಕೀಲ ವೃತ್ತಿಗೆ ನೊಂದಾಯಿತರಲ್ಲದ).



**4.ಅರ್ಹತೆ :** ಶಿಕ್ಷಕರು (ನಿವೃತ್ತ ಶಿಕ್ಷಕರು ಸಹ), ನಿವೃತ್ತ ಸರ್ಕಾರಿ ನೌಕರರು, ಹಿರಿಯ ನಾಗರೀಕರು, ಎಂ.ಎಸ್.ಡಬ್ಲ್ಯೂ, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು ಮತ್ತು ಫಿಜಿಶಿಯನ್, ಕಾನೂನು ಪದವೀದರರು (ವಕೀಲ ವೃತ್ತಿಗೆ ನೊಂದಾಯಿತರಲ್ಲದ), ರಾಜಕೀಯೇತರ ಸದಸ್ಯರು, ಸೇವೆಗಳ ನಿರತ ಎನ್.ಜಿ.ಒ ಗಳು, ಮಹಿಳಾ ನೆರೆಹೊರೆಯ ಗುಂಪುಗಳ, ಮೈತ್ರಿ ಸಂಘಗಳ ಸದಸ್ಯರು, ಸ್ವ ಸಹಾಯ ಗುಂಪುಗಳ ಸದಸ್ಯರು, ವಿದ್ಯಾವಂತ ಮತ್ತು ಉತ್ತಮ ನಡತೆವುಳ್ಳ ಖೈದಿಗಳು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಮಿತಿ ಗುರುತಿಸುವ ಇತರೆ ಅರ್ಹ ವ್ಯಕ್ತಿಗಳು.

**5.ಸಂಭಾವನೆ:** ಪಿಎಲ್‌ವಿಗಳಾಗಿ ನೇಮಕಾತಿ ಹೊಂದಿದಲ್ಲಿ, ಸೇವೆಗಳ ಮನೋಭಾವ ಮಾತ್ರ ಇರುವಂತಹ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವ ಪಿಎಲ್‌ವಿಗಳಿಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿಗದಿಸಲ್ಪಡುವ ಗೌರವಧನ ನೀಡಲಾಗುವುದು. ( ನಿಗದಿತ ವೇತನ , ಮತ್ತು ಸಂಭಾವನೆ ಇರುವುದಿಲ್ಲ )

**6.ತರಬೇತಿ :** ಆಯ್ಕೆಗೊಂಡ ಪಿಎಲ್‌ವಿಗಳಿಗೆ ತರಬೇತಿ ನೀಡಲಾಗುವುದು ಅಲ್ಲದೇ ತರಬೇತಿಗೆ ಹಾಜರಾಗಲು ನಿರಾಕರಿಸಬಾರದು.

## B) ಷರತ್ತುಗಳು:

1. ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿಮಾಡತಕ್ಕದ್ದು ಅಪೂರ್ಣ ಅರ್ಜಿಯನ್ನು ನೇಮಕಾತಿ ಸಮಿತಿಯು ತಿರಸ್ಕರಿಸಲು ಬದ್ಧವಾಗಿರುತ್ತದೆ. (ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಗುರುತಿನ ಚೀಟಿ ಗಳ ) ಪ್ರತಿಯನ್ನು ಲಗತ್ತಿಸುವುದು ಕಡ್ಡಾಯ.
2. ಅರ್ಜಿದಾರರ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಗೌರವಾನ್ವಿತ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ, ಯೋಜನೆಗಳು ಮತ್ತು ಸೇವೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ಮತ್ತು ಕಾನೂನು ಸಹಾಯ ನೀಡುವ ಉದ್ದೇಶಕ್ಕೆ ಪಿಎಲ್‌ವಿ ಗಳ ನೇಮಕಾತಿ ಮಾಡಲಾಗುತ್ತಿದ್ದು, ನೇಮಕಾತಿ ಪ್ರಕ್ರಿಯೆಯು ಸಮಿತಿಯ ನಿರ್ಧಾರದ ಮೇಲೆ ಅವಲಂಬಿಸಿರುತ್ತದೆ .

sd/ sd/

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು
ಪಿಎಲ್‌ವಿ ಗಳ ನೇಮಕಾತಿಯ ಸಮಿತಿಯ ಸದಸ್ಯರು

ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮತ್ತು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ
ಪಿಎಲ್‌ವಿಗಳ ನೇಮಕಾತಿಯ ಸಮಿತಿ, .